### ಕಲಾವಿದ ಬಿ.ಎಸ್‌.ದೇಸಾಯಿ ಅವರಿಂದ ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ

# ಕ್ಯಾಮೆರಾ ಕಣ್ಣಿನಲ್ಲಿ ಪಕ್ಷಿ ಲೋಕ

• ನವೀನ್ ಕುಮಾರ್ ಎನ್.

ಮೈಸೂರು: ವನ್ಯಜೀವಿ ಅಥವಾ ಪಕ್ಷಿಗಳ ಫೋಟೊ ತೆಗೆಯಲು ದುಬಾರಿ ಬೆಲೆಯ ಕ್ಯಾಮೆರಾ ಬೇಕು ಎಂಬುದು ರೂಢಿಗತ ಮಾತು. ಆದರೆ, ಕಡಿಮೆ ಬೆಲೆಯ ಕ್ಯಾಮೆರಾದಲ್ಲೂ ಗುಣಮಟ್ಟದ ಪಕ್ಷಿಗಳ ಚಿತ್ರಗಳನ್ನು ಸೆರೆ ಹಿಡಿಯಬಹುದು ಎಂಬುದಕ್ಕೆ ಬಿ.ಎಸ್‌.ದೇಸಾಯಿ ಉತ್ತಮ ಉದಾಹರಣೆ.

ಪಕ್ಷಿ ಸಂಕುಲ, ಕೀಟ ಪ್ರಪಂಚದ ಅನೇಕ ಛಾಯಾಚಿತ್ರಗಳನ್ನು ಸೆರೆ ಹಿಡಿದಿರುವ ದೇಸಾಯಿ, ಅದರಲ್ಲಿ ಅತ್ಯುತ್ತಮ ಎನಿಸಿದ 96 ಚಿತ್ರಗಳನ್ನು ಮೈಸೂರಿನ ವಿಜಯನಗರದಲ್ಲಿರುವ ಶ್ರೀಕಲಾನಿಕೇತನ ದೃಶ್ಯಕಲಾ ಕಾಲೇಜಿನಲ್ಲಿ ಚಿತ್ಕಲಾ ಪ್ರತಿಷ್ಠಾನದ ಸಹಯೋಗದಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ.

ಜಲಮೂಲಗಳನ್ನು ಆಶ್ರಯಿಸಿ ಬದುಕುವ ಪಕ್ಷಿಗಳು, ವಲಸೆ ಹಕ್ಕಿಗಳು, ಅಳಿವಿನಂಚಿನ ಪಕ್ಷಿಗಳು, ಕೀಟ ಪ್ರಪಂಚದ ಅನೇಕ ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ. ಅಪರೂಪದ ಹಸಿರು ಪಾರಿವಾಳ, ಸೈಬೀರಿಯಾ, ಅಟ್ಲಾಂಟಿಕ ಭಾಗದಿಂದ ಬರುವ ಬಣ್ಣದ ಕೊಕ್ಕರೆ, ಹೆಜ್ಜಾರ್ಲೆ, ಮಂಗೋಲಿಯಾದಿಂದ ಬರುವ ಪಟ್ಟೆ ತಲೆ ಬಾತುಕೋಳಿ, ಈಜಿಪ್ಟಿನ ರಣಹದ್ದುಗಳು, ನೆಲಕುಟುಕ, ಮರಕುಟುಕ, ಚುಕ್ಕೆ ಬಾತುಕೋಳಿ, ಸಿಕ್ರ ಪಕ್ಷಿ, ಕೋಗಿಲೆ, ಕಾಜಾಣ, ನೀಲಕಂಠ ಪಕ್ಷಿ, ಕೆಮ್ಮಂಡೆ ಗಿಳಿ, ಕವುಜಗ, ಚೊಟ್ಟೆ ಕೋಗಿಲೆ, ತಂತಿ ಬಾಲದ ಅಂಬರ ಗುಬ್ಬಿ, ಬಾಲದಂಡೆ ಹಕ್ಕಿ, ನೀಲಿ ಸಿಳ್ಳಾರ, ಗುಲಾಬಿ ಕುತ್ತಿಗೆಯುಂಗರದ ಗಿಳಿ, ಬೂದು ಮಂಗಟ್ಟೆ, ಬಿಳಿ ಗರುಡ, ಬೂದು ತಲೆಯ ಗಿಳಿ, ನೀಲಿ ಮುಖದ ಮಲ್ಕೋಹಾ, ಪಿಕಳಾರ, ಬೂದು ಬಕ, ರಾಮದಾಸ ಹಕ್ಕಿ ಹೀಗೆ... ವೈವಿಧ್ಯಮಯ ಪಕ್ಷಿ ಸಂಕುಲದ ಚಿತ್ರಗಳನ್ನು ಕಣ್ತುಂಬಿಕೊಳ್ಳಬಹುದು.

ಕೀಟ ಪ್ರಪಂಚಕ್ಕೆ ಸಂಬಂಧಿಸಿದಂತೆ ಆರು ಚಿತ್ರಗಳನ್ನು ಮಾತ್ರ ಪ್ರದರ್ಶನಕ್ಕಿಡಲಾಗಿದೆ. ವಿವಿಧ ಜೇಡ, ಏರೋಪ್ಲೇನ್ ಚಿಟ್ಟೆ ಸೇರಿದಂತೆ ಕೀಟಗಳ ಚಿತ್ರಗಳಿವೆ.

ವಿಜಯಪುರ ಜಿಲ್ಲೆಯ ತಾಳಿಕೋಟೆಯ ಬಿ.ಎಸ್‌.ದೇಸಾಯಿ ಸದ್ಯ ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಕಲ್ಲಾರೆ ಸರ್ಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದಾರೆ. ಅವರಿಗೆ ಛಾಯಾಗ್ರಹಣ ಹವ್ಯಾಸ. ಪಕ್ಷಿ ಸಂಕುಲದ ವೈವಿಧ್ಯತೆ, ಬಣ್ಣ, ಆಕಾರಕ್ಕೆ ಮನಸೋತು ಪಕ್ಷಿಗಳ ಬಗ್ಗೆ ಅಧ್ಯಯನ ನಡೆಸಲಾರಂಭಿಸಿದ್ದರು. ಈ ಹಿಂದೆ ಹಾಸನ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದಾಗ ಅಲ್ಲಿನ ಹುಣಸಿನಕರೆಗೆ ಬರುತ್ತಿದ್ದ ಪಕ್ಷಿಗಳ ಛಾಯಾಚಿತ್ರ ತೆಗೆಯಲು ಆರಂಭಿಸಿದ್ದರು. ಈ ಹವ್ಯಾಸ ರಾಜ್ಯದ ವಿವಿಧ ಜಿಲ್ಲೆ, ಹೊರ ರಾಜ್ಯಕ್ಕೂ ತೆರಳಿ ಪಕ್ಷಿಗಳ ಚಿತ್ರ ತೆಗೆಯುವಂತೆ ಪ್ರೇರೇಪಿಸಿತು.

ಹಾಸನ, ಹಾವೇರಿ, ಕಾಸರಗೋಡು, ಸಕಲೇಶಪುರ, ಹಂಪಿ ಸೇರಿದಂತೆ ವಿವಿಧ ಭಾಗಗಳಲ್ಲಿ ಪಕ್ಷಿಗಳ ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ. ಕಲ್ಲಾರೆ ಗ್ರಾಮವು ಪಶ್ಚಿಮಘಟ್ಟ ಭಾಗದಲ್ಲಿರುವುದರಿಂದ ವೈವಿಧ್ಯಮಯ ಪಕ್ಷಿ ಸಂಕುಲವನ್ನು ಸೆರೆ ಹಿಡಿಯಲು ಅವರಿಗೆ ಅನುಕೂಲವಾಗಿದೆ. ಸಂಪರ್ಕಕ್ಕೆ ಮೊ.ಸಂ. 9343431722.


ನೀಲಕಂಠ ಪಕ್ಷಿ


ಹಸಿರು ಪಾರಿವಾಳ


ಚೊಟ್ಟೆ ಮೈನಾ


ಕಾಜಾಣ



**ಬುದ್ಧಿಜೀವಿ ಎನಿಸಿದ ಮನುಷ್ಯನಿಂದಲೇ ಪ್ರಕೃತಿಗೆ ಧಕ್ಕೆಯಾಗುತ್ತಿದೆ. ಪಕ್ಷಿ, ಕೀಟ ಸಂಕುಲವನ್ನು ನಾಶ ಮಾಡುತ್ತಿದ್ದಾನೆ. ಇದನ್ನು ತಪ್ಪಿಸುವುದು ಪ್ರತಿಯೊಬ್ಬರ ಕರ್ತವ್ಯ**

**ಬಿ.ಎಸ್‌.ದೇಸಾಯಿ,** ಕಲಾವಿದ

### 31ರವರೆಗೆ ಪ್ರದರ್ಶನ

ಬಿ.ಎಸ್‌.ದೇಸಾಯಿ ಅವರ ‘ನವರಾತ್ರಿ ಕಲೋತ್ಸವ’ ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನಕ್ಕೆ ಸೆ.27ರಂದು ವನ್ಯಜೀವಿ ಛಾಯಾಚಿತ್ರ ಕಲಾವಿದರಾದ ಕೃಪಾಕರ–ಸೇನಾನಿ ಚಾಲನೆ ನೀಡಿದ್ದು, ಅ.31ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಪ್ರದರ್ಶನವಿದೆ.

### ಉತ್ತಮ ಫಲಿತಾಂಶ

ವನ್ಯಜೀವಿ ಛಾಯಾಗ್ರಹಣಕ್ಕೆ ಲಕ್ಷಾಂತರ ರೂಪಾಯಿ ಮೌಲ್ಯದ ಕ್ಯಾಮೆರಾ, ಲೆನ್ಸ್‌ಗಳನ್ನು ಬಳಸುವುದು ಸಾಮಾನ್ಯ. ಆದರೆ, ದೇಸಾಯಿ ಅವರು ₹ 25 ಸಾವಿರಕ್ಕೆ ಖರೀದಿಸಿದ್ದ ‘ನಿಕಾನ್ ಕೂಲ್‌ಪಿಕ್ಸ್ ಪಿ 600’ ಕ್ಯಾಮೆರಾದಲ್ಲೇ ಈ ಚಿತ್ರಗಳನ್ನು ಸೆರೆ ಹಿಡಿದಿರುವುದು ವಿಶೇಷ.